# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 255/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಜಯಮ್ಮ | ಪಿಡಬ್ಲ್ಯೂ ಃ 6 |
| ತಂದೆಯ / ಗಂಡನ ಹೆಸರು | : ಚಿಕ್ಕರಾಚಶೆಟ್ಟಿ | ಸಿಡಬ್ಲ್ಯೂ ಃ 8 |
| ವಯಸ್ಸು | : 55 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸಸ್ಥಳ | : ಹುಲ್ಲೆಪುರ ಗ್ರಾಮ , ಗುಂಡ್ಲುಪೇಟೆ ತಾಲೂಕು , ಚಾಮರಾಜನಗರ ಜಿಲ್ಲೆ | |

**ಸಾಕ್ಷಿಯನ್ನು ಈ ದಿನ ದಿಃ 27.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನನ್ನ ತಾಯಿಯ ಮನೆ ಬೆಳವಾಡಿ, ಗುಂಡ್ಲುಪೇಟೆ ತಾಲೂಕು. ಮೃತ ಚಿಕ್ಕರಾಚಶೆಟ್ಟಿ ನನ್ನ ಗಂಡ. ನಮ್ಮ ಮದುವೆಯಾಗಿ 35 ವರ್ಷಗಳಾದವು. ಮದುವೆಯಾದ ನಂತರ 1 ವರ್ಷ ನಾವು ನಂಜನಗೂಡಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಿದ್ದೆವು. ನಂತರ ಒಂದು ಮಗು ಹುಟ್ಟಿತು. ಆಮೇಲೆ ಹುಣಸನಾಳು ಗ್ರಾಮಕ್ಕೆ ಹೋದೆವು. ಒಂದು ಮಗು ಆದ ನಂತರ , ಚಿಕ್ಕರಾಚಶೆಟ್ಟಿಗೆ ಈ ಹಿಂದೆ ಒಂದು ಮದುವೆಯಾಗಿರುವ ವಿಷಯ ತಿಳಿಯಿತು. ಅವರ ಮೊದಲನೆ ಹೆಂಡತಿಗೆ ಒಟ್ಟು 6 ಜನ ಮಕ್ಕಳಿದ್ದರು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ , 2 ನೇ ಆರೋಪಿಯ ಮಗ. 2 ನೇ ಆರೋಪಿ ನನ್ನ ಅಕ್ಕ. ಹುಣಸನಾಳು ಗಾಮದಲ್ಲಿ ನಾನು ನನ್ನ ಗಂಡನ ಮನೆಯಲ್ಲಿಯೇ ವಾಸವಿದ್ದೆ. ಆ

ಮನೆಯಲ್ಲಿ ನಾನು , ನನ್ನ ಮಗ , ನನ್ನ ಅಕ್ಕ ಮತ್ತು ಆಕೆಯ ಮಕ್ಕಳು ಇದ್ದೆವು. ನನ್ನ ಗಂಡನಿಗೆ ಸುಮಾರು 14 - 15 ಎಕರೆ ಜಮೀನು ಇತ್ತು. ಅವರುಗಳು ನನ್ನ ಗಂಡನ ಮೇಲೆ ಜಗಳವಾಡುತ್ತಿದ್ದರು. ಈಗಾಗಿ ನಾವು ಬೇರೆ ಹೋದೆವು. ಪಕ್ಕದಲ್ಲಿಯೇ ನಾವು ವಾಸ ಮಾಡುತ್ತಿದ್ದೆವು. ಅಂದರೆ ನನ್ನ ಗಂಡನನ್ನು ಅವರು ಸಾಯಿಸಿದ ಶೆಡ್ ನಲ್ಲಿ ನಾವು ವಾಸ ಮಾಡುತ್ತಿದ್ದೆವು. ಹುಣಸನಾಳಿಗೆ ಹೋದ 3 ವರ್ಷ ಕ್ಕೆ ನಾವು ಬೇರೆಯಾದೆವು. ಮೊದಲನೆ ಮಗನಿಗೆ 4 ವರ್ಷ ತುಂಬಿದಾಗ ಎರಡನೆ ಮಗ ಹುಟ್ಟಿದ್ದ. ನನ್ನ ಮಕ್ಕಳ ಹೆಸರು ಶ್ರೀಕಂಠ ಮತ್ತು ಶಿವುಶೆಟ್ಟಿ ಎಂದು. ನನ್ನ ಅಕ್ಕ ನನ್ನ ಗಂಡನ್ನೊಂದಿಗೆ, ಆತ ನನ್ನನ್ನು ಮದುವೆ ಮಾಡಿಕೊಂಡು ಬಂದಿದ್ದಕ್ಕಾಗಿ ಯಾವಾಗಲೂ ಜಗಳವಾಡುತ್ತಿದ್ದಳು. ಇದೇ ರೀತಿ ಜಗಳವಾಡುತ್ತಿದ್ದಾಗ ನನಗೆ, ನನ್ನ ಗಂಡನಿಗೆ ರಾಜು , ಶಿವನಾಗ , ಬಸಮ್ಮ ಹೊಡೆದಿದ್ದರು. ಒಮೆಂ ನನ್ನ ಗಂಡನ ತಲೆಗೆ ಹೊಡೆದು ತಲೆ ಸೀಳಿದ್ದರು. ಆಗ ಆತ ಒಂದು ತಿಂಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನನ್ನ ಕೈ ಗೆ, ಕುತ್ತಿಗೆಗೆ , ಕಿವಿಗೆ ದೊಣ್ಣೆ ಮತ್ತು ಇಳಿಗೆ ಮಣೆಯಲ್ಲಿ ಹೊಡೆದಿದ್ದರು. ಈ ಬಗ್ಗೆ ನಂಜನಗೂಡು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೆವು. ನಂತರ ಅವರುಗಳು ನಾವು ರಾಜೀ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಆಗ ಪೋಲಿಸರು ಸಹಿ ಹಾಕಿಸಿಕೊಂಡರು.

2. ಇದೇ ರೀತಿ ನನಗೆ ಹೊಡೆ ಬಡೆ ಮಾಡುತ್ತಿದುದರಿಂದ ಇಲ್ಲಿ ಇರುವುದು ಬೇಡ ಎಂದು ನಾವು ಹುಲ್ಲೇಪುರಕ್ಕೆ (ಗುಂಡ್ಲುಪೇಟೆ ತಾಲೂಕು) ಹೋದೆವು. ಅಲ್ಲಿ ಒಂದು ಬಾಡಿಗೆ ಮನೆಯಲ್ಲಿ ಇದ್ದೆವು. ನಾನು ಮತ್ತು ನನ್ನ ಗಂಡ ಮಾತ್ರ ಹುಲ್ಲೇಪುರಕೆಕ ಹೋಗಿ ವಾಸ ಮಾಡಲು ಫ್ರಾರಂಬಿಸಿದೆವು. ನನ್ನ ಇಬ್ಬರು ಮಕ್ಕಳು ಹುಣಸನಾಳಿನಲ್ಲೀ ವಾಸ ಮಾಡುತ್ತಿದ್ದರು. ಸಾಕ್ಷಿ ಪುನಃ ನುಡಿಯುತ್ತಾರೀ ನನ್ನ ದೊಡ್ಡ ಮಗ ಶ್ರೀಕಂಠ

ಹುಣಸನಾಳಿನಲ್ಲೀ ಉಳಿದ . ಎರಡನೇ ಮಗ ನನ್ನ ತಾಯಿಯ ಮನೆಗೆ ಹೋದ. ಶ್ರೀಕಂಠ ನಿಗೆ ಮದುವೆ ಮಾಡಿದ್ದೆವು . ಆದ್ದರಿಂದ ಆತ ಅಲ್ಲಿ ತನ್ನ ಕುಟುಂಬದೊಂದಿಗೆ ಇದ್ದ.

3. ಈಗ್ಗೆ 1 ವರ್ಷಗಳ ಹಿಂದೆ ನನ ಗಂಡ ಮೃತ ಪಟ್ಟರು. ದಿ.01.06.2023 ರಂದು ನನ್ನ ಗಂಡ ಮದುವೆಗೆ ಹೋಗಿ , ಹೊಲದ ಕಡೆಗೂ ಹೋಗಿ ಬರುತ್ತೇನೆ ಎಂದು ಹೇಳಿ ಹೋದರು . ಬೆಳಿಗ್ಗೆ 08.00 ಗಂಟೆಗೆ ಮನೆಯನ್ನು ಬಿಟ್ಟರು. ನನಗೆ ಹುಷಾರಿರಲಿಲ್ಲ , ನಾನು ಮಲಗಿದ್ದೆ. ಮದ್ಯಾಹ್ಣ 12.00 ಗಂಟೆಗೆ ನಾನು ನನ್ನ ಗಂಡನಿಗೆ ಪೋನ್ ಮಾಡಿದೆ . ಅವರು ಪೋನ್ ಎತ್ತಲಿಲ್ಲ. 4 ಬಾರಿ ಪೋನ್ ಮಾಡಿದೆ . 4 ಬಾರಿಯೂ ಪೋನ್ ತೆಗೆಯಲಿಲ್ಲ. ಮಧ್ಯಹ್ನ 02.30 ರ ಸಮಯಕೆಕ ನಾನು ನನ್ನ ಮಗ ಶ್ರೀಕಂಠ ನಿಗೆ ಪೋನ್ ಮಾಡಿ , ಅಪ್ಪ ಪೋನ್ ತೆಗೆಯುತ್ತಿಲ್ಲ , ನೋಡು ಎಂದು ಹೇಳಿದೆ. ನಂತರ ಆತ ನನಗೆ ಪೋನ್ ಮಾಡಲಿಲ್ಲ. ಸಂಜೆ 05.00 ಗಂಟೆಗೆ ಆತ ಅಳುತ್ತಾ ಪೋನ್ ಮಾಡಿ , "ಬಸಮ್ಮ ಮತ್ತು ಶಿವನಾಗ ನನ್ನ ಗಂಡನನ್ನು ನಾವು ಇದ್ದಂತಹ ಶೆಡ್ ನಲ್ಲಿಯೇ ಹೊಡೆದು ಮಲಗಿಸಿದ್ದಾರೆ" ಎಂದು ಹೇಳಿದ. ಶ್ರೀಕಂಠ ನ ಹೆಂಡತಿಗೆ ಡೆಲಿವೆರಿಯಾಗಿ ಮೈಸೂರಿನಲ್ಲಿ ಇದ್ದಳು. ಆ ದಿನಕ್ಕೆ 8 ದಿನ ವಾಗಿತ್ತು. ಮರುದಿನ ಬೆಳಿಗ್ಗೆ ನಾನು ನನ್ನ ಮಕ್ಕಳು ನಂಜನಗೂಡು ಪೊಲೀಸ್ ಠಾಣೆಗೆ ಬಂದೆವು. ಶಿವು ಬೆಂಗಳೂರಿನಲ್ಲಿ ಇದ್ದ. ಆತ ರಾತ್ರಿ 12.00 ಗಂಟೆಗೆ ಮನೆಗೆ ಬಂದಿದ್ದ. ನಂತರ ನಾವು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಬಂದೆವು. ಅಲ್ಲಿ ನನ್ನ ಗಂಡನ ಶವವನ್ನು ಇರಿಸಿದ್ದರು. ನಾನು ಶವವನ್ನು ನೋಡಿದೆ. ಮುಖ , ತಲೆ , ಮೈ ಕೈ ಗೆಲ್ಲಾ ಗಾಯಗಳಾಗಿದ್ದವು. ನಂತರ ಪೊಲೀಸರು ಅಲಿಲ ಬರವಣಿಗೆ ಮಾಡಿದರು . ಪೋಸ್ ಮಾರ್ಟಮ್ ಮಾಡಿದರು. ಶವವನ್ನು 05.00 ಗಂಟೆಗೆ ಕೊಟ್ಟರು. ಶವವನ್ನು ನಾವು ಹುಲ್ಲೇಪುರಕ್ಕೆ ತೆಗೆದುಕೊಂಡು ಹೋದೆವು. ಅಲ್ಲೇ

ಶವ ಸಂಸ್ಕಾರ ಮಾಡಿದೆವು. ಪೋಲೀಸರಿಗೆ ಈ ಬಗ್ಗೆ ನನ್ನ ಹೇಳಿಕೆ ನೀಡಿರುತ್ತೇನೆ. ನನ್ನ ಗಂಡ ಜಮೀನನ್ನು ಮಾರಿಕೊಳ್ಳುತ್ತಾನೆ ಎಂದು ಬಸಮ್ಮ ಮತ್ತು ಶಿವನಾಗ ಆತನನ್ನು ಕೊಲೆ ಮಾಡಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

4. ನನ್ನ ಮತ್ತು ಚಿಕ್ಕರಾಚಶೆಟ್ಟಿಯ ಮದುವೆಯಾದ ದಿನಾಂಕ ನನಗೆ ನೆನಪಿಲ್ಲ. ನಾನು ನನ್ನ ಗಂಡನ್ನೊಂದಿಗೆ ಹುಣಸನಾಳು ಗ್ರಾಮಕ್ಕೆ ವಾಸ ಮಾಡಲು ಹೋದ ದಿನಾಂಕ ಮತ್ತು ವರ್ಷ ನನಗೆ ನೆನಪಿಲ್ಲ. 20 ವರ್ಷದ ಹಿಂದೆ ನನಗೆ ನನ್ನ ಗಂಡನಿಗೆ ಹೊಡೆದಿದ್ದರು. ಆಗ ನನ್ನ ಗಂಡ ಆಸ್ಪತ್ರೆಗೆ ಸೇರಿದ್ದರು. ಆದರೆ ಆ ದಿನಾಂಕ ಮತ್ತು ವರ್ಷದ ನೆನಪಿಲ್ಲ. ನನ್ನ ಇಬ್ಬರು ಮಕ್ಕಳು ಹುಟ್ಟಿದ ತಾರೀಖ ನ್ನು ನನಗೆ ಹೇಳಲು ಆಗುವುದಿಲ್ಲ.

5. ಮೈಸೂರಿನ ಕೆ ಆರ್ ಆಸ್ಪತೆ ಗೆ ನನ್ನ ಗಂಡ ನ ಶವ ನೋಡಲು ನಾವು 1 ನೇ ತಾರೀಖಿ ನಂದು ಬಂದಿದ್ದೆವು. ನನಗೆ ಒಂದು ಮಗು ಆದ ನಂತರ ನನ್ನ ಗಂಡನಿಗೆ ಮೊದಲೆ ಒಂದು ಮದುವೆಯಾಗಿತ್ತು ಎಂದು ತಿಳಿದು ಬಂತು. ಆಗ ನಾನು ನನ್ನ ಗಂಡನಿಗೆ ಈ ವಿಷಯವನ್ನು ನನಗೆ ಮೊದಲೇ ಏಕೆ ಹೇಳಿಲ್ಲ ಎಂದು ಪ್ರಶ್ನಿಸಿದ್ದೆ. ಆ ಸಂದರ್ಭದಲ್ಲಿ ಪಂಚಾಯಿತಿ ಆಗಿತ್ತು. ಆ ರೀತಿ ಪಂಚಾಯಿತಿ ಆದಾಗ ನಾವು ಹುಣಸನಾಳಲ್ಲೇ ವಾಸವಿದ್ದೆವು. ಪಂಚಾಯಿತಿಯಲ್ಲಿ , ಎಲ್ಲರೂ ಒಟ್ಟಾಗಿ ಇರಿ ಎಂದು ಹೇಳಿದರು ಎಂದು ಮಾಡಿದ ಸಲಹೆಗೆ ಸಾಕ್ಷಿ , ಅದಕ್ಕೂ ಮುಂಚೆಯೇ ನಾವು ಬೇರೆ ಬೇರೆ ಯಾಗಿ ವಾಸ ಮಾಡುತ್ತಿದ್ದೆವು ಎನ್ನುತ್ತಾರೆ. ನನಗೂ ಮತ್ತು ನನ್ನ ಗಂಡನಿಗೂ ಜಗಳವಾಗುತ್ತಿದ್ದರಿಂದ ಪಂಚಾಯಿತಿ ಆಗಿತ್ತು ಎನ್ನುವುದು ಸರಿಯಲ್ಲ.

6. ನನ್ನ ಗಂಡ ಮದುವೆಗೆ ಹೊಗುತ್ತೇನೆ ಎಂದು ಹೇಳಿ ಹೋದಾಗ ನಾನು ಅವರನ್ನು ಕೊನೆಯದಾಗಿ ನೋಡಿ , ನಂತರ ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ಅವರ ಶವವನ್ನು ನೋಡಿದ್ದೆ ಎನ್ನುವುದು ಸರಿ. ನಾವು ಮತ್ತು ನ್ನ ಮಕ್ಕಳು ನಂಜನಗೂಡು ಪೊಲೀಸ್ ಠಾಣೆಗೆ ಬೆಳಿಗ್ಗೆ 11.00 ಗಂಟೆಯಾಗಿತ್ತು. ಅಲ್ಲಿ ಪೊಲೀಸರ ಮುಂದೆ ನಾವು ಘಟನೆ ನಡೆದಿರುವ ಬಗ್ಗೆ ಎನನ್ನು ಹೇಳಿರುವುದಿಲ್ಲ . ಸಾಕ್ಷಿ ಸ್ವತಃ ನುಡಿಯುತ್ತಾರೆ , ಮೆಎಸಾುರಿನ ಶವಗಾರದಲಲ್ಲಿ ಪೊಲೀಸರು ಕೇಳಿದರು , ಆಗ ಹೇಳಿದೆವು ಎನ್ನುತ್ತಾರೆ . ನಂನಜಗೂಡು ಪೋಲೀಸ್ ಠಾಣೆಯಲ್ಲಿ ನಾವು ಹೇಳಲು ಬಿಡಲಿಲ್ಲ ಏಕೆಂದರೆ ಕಾಡಲೇ ನಮ್ಮನ್ನು ಕರೆದುಕೊಂಡು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಬಂದರು. ಆ ದಿನ ನಾವು ನಂಜನಗೂರಿನ ಪೊಲೀಸ್ ಠಾಣೆಗೆ ಹೋಗಿರುವುದೆ ಇಲ್ಲ ಎನ್ನುವುದು ಸರಿಯಲ್ಲ. ನಾವು ನೇರವಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಬಂದಿದ್ದೆವು ಎನ್ನುವುದು ಸರಿಯಲ್ಲ.

7. ಕೆ ಆರ್ ಆಸ್ಪತ್ರೆಗೆ ಬಂದಾಗ ಮದ್ಯಾಹ್ಣ 12.00 ಗಂಟೆಯಾಗಿತ್ತು. ನನ್ನ ಮಕ್ಕಳನ್ನು ಕೆ ಆರ್ ಆಸ್ಪತ್ರೆಯಲ್ಲಿ ಪೊಲೀಸರು ವಿಚಾರಿಸಿದರೋ ಇಲವೋ ನನಗೆ ಗೊತ್ತಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ಸಂಜೆ 04.00 ಗಂಟೆಯವರೆಗೂ ಅಂದರೆ ಶವವನ್ನು ನಮಗೆ ಕೊಡುವ ವರೆಗೂ ಇದ್ದೆವು.

8. ನಾನು ಪೊಲೀಸರ ಮುಂದೆ, 'ಒಂದು ಮಗು ಆದ ನಂತರ ನನ್ನ ಗಂಡ ಈಗಾಗಲೇ ಒಂದು ಮದುವೆಯಾಗಿರುವ ಬಗ್ಗೆ ತಿಳಿಸಿದರು' ಎಂದು ಹೇಳಿರುವುದಿಲ್ಲ. ಪೊಲೀಸರ ಮುಂದೆ ನಾನು , 'ನನ್ನ ಗಂಡನಿಗೆ 14 ಎಕರೆ ಜಮೀನು ಇತ್ತು' , ಎಂದು ಹೇಳಿರುವುದಿಲ್ಲ. ನಾನು ಪೋಲಿಸೀರ ಮುಂದೆ , 'ಬಸಮ್ಮ ಮತ್ತು ಆಕೆಯ ಮಕ್ಕಳು ನನ್ನ ಗಂಡನ್ನೊಂದಿಗೆ ಯಾವಾಗಲಾು ಜಗಳವಾಡುತ್ತಿದ್ದರು' , ಎಂದು ಹೇಳಿರುತ್ತೇನೆ. ನಾನು

ಪೊಲೀಸರ ಮುಂದೆ , 'ಹುಣಸನಾಳಿಗೆ ಬಂದ 3 ವರ್ಷಗಳ ನಂತರ ಅಲ್ಲೀ ಪಕ್ಕದಲ್ಲಿ ಒಂದು ಶೆಡ್ ನ್ನು ಹಾಕಿಕೊಂಡು ಬೇರೆಯಾಗಿ ವಾಸ ಮಾಡಲು ಪ್ರಾರಂಭಿಸಿದೆವು', ಎಂದು ಹೇಳಿರುತ್ತೇನೆ . ಪೋಲೀಸರ ಮುಂದೆ ನಾನು , ಆ ಶೆಡ್ ನಲ್ಲಿ ನಾವುಗಳು ವಾಸ ಮಾಡಲು ಪ್ರಾರಂಬಿಸಿದಾಗ , 'ಬಸಮ್ಮ ನನ್ನ ಗಂಡನ್ನೊಂದಿಗೆ , ಇನ್ನೊಂದು ಮದುವೆ ಮಾಡಿಕೊಂಡು ಬಂದಿದ್ದಿಯಾ ಎಂದು ಜಗಳವಾಡುತ್ತಿದ್ದಳು ಮತ್ತು ಶಿವನಾಗ ಮತ್ತು ಬಸಮ್ಮ , ರಾಜು ನಮ್ಮಿಬ್ಬರಿಗೂ ಹೊಡೆಯುತ್ತಿದ್ದರು' , ಎಂದು ಹೇಳಿರುತ್ತೇನೆ. ಪೋಲೀಸರ ಮುಂದೆ ನಾನು , ಒಮ್ಮೆ ನನಗೂ ನನ್ನ ಗಂಡನಿಗೂ ಬಸಮ್ಮ ಮತ್ತು ಶಿವನಾಗ , ರಾಜು , ದೊಣ್ಣೆ ಮತ್ತು ಇಳಿಗೆ ಮಣೆಯಿಂದ ಹೊಡೆದು , ನನ್ನ ಗಂಡನ ತಲೆಯನ್ನು ಸೀಳಿದ್ದರು , ಆತ ಒಂದು ತಿಂಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದರು , ಎಂದೂ ಸಹ ಹೇಳಿರುತ್ತೇನೆ. ಪೋಲೀಸರ ಮುಂದೆ ನಾನು , ಈ ಬಗ್ಗೆ ದೂರು ಕೊಟ್ಟಿದ್ದು , ಅದು ರಾಜೀ ಯಾಯಿತು , ಪೊಲೀಸರು ಸಹಿ ಮಾಡಿಸಿಕೊಂಡಿದ್ದರು , ಎಂದು ಹೇಳಿರುವುದಿಲ್ಲ. ಯಾವುದೇ ಗಲಾಟೆಯನ್ನು ಅವರು ಮಾಡಿರುವುದಿಲ್ಲ ಮತ್ತು ನಾವು ದೂರನ್ನು ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ಪೋಲೀಸರ ಮುಂದೆ ನಾನು , ನನ್ನ ಹಾಗೂ ನನ್ನ ಗಂಡನ ಮೇಲೆ ಹೊಡೆ ಬಡೆ ಮಾಡುತ್ತಿದ್ದರಿಂದ , ನಾವು ಹುಲ್ಲೆಪುರಕ್ಕೆ ಹೋದೆವು, ಎಂದು ಪೊಲೀಸರ ಮುಂದೆ ಹೇಳಿರುತ್ತೇನೆ.

9. ಪೋಲೀಸರ ಮುಂದೆ ನಾನು , 12.00 ಗಂಟೆಗೆ ನಾನು ನನ್ನ ಗಂಡನಿಗೆ ಪೋನ್ ಮಾಡಿದೆ, ಅವರು ತೆಗೆಯಲ್ಲಿ , ನಂತರ ನಾಲ್ಕು ಬಾರಿ ಪೋನ್ ಮಾಡಿದೆ , ಅವರು ಪೋನ್ ತೆಗೆಯಲಿಲ್ಲ , ಎಂದು ಪೋಲಿಸರ ಮುಂದೆ ಹೇಳಿರುತ್ತೇನೆ. ಪೋಲೀಸರ ಮುಂದೆ ನಾನು , 02.30 ಕ್ಕೆ ಶ್ರಿಲಕಂಠ ನಿಗೆ ಪೋನ್ ಮಾಡಿ , ಅಪ್ಪ ಪೋನ್

ತೆಗೆಯುತ್ತಿಲ್ಲ ನೋಡು ಎಂದು ತಿಳಿಸಿದೆ ನಂತರ ಆತ ನನಗೆ ಫೋನ್ ಮಾಡಲಿಲ್ಲ , ಎಂದು ಹೇಳಿರುತ್ತೇನೆ. ಪೋಲೀಸರ ಮುಂದೆ ನಾನು , ಸಂಜೆ 05.00 ಗಂಟೆಗೆ ಶ್ರೀಕಂಠ ನನಗೆ ಫೋನ್ ಮಾಡಿ , ಬಸಮ್ಮ ಮತ್ತು ಶಿವನಾಗ ಅಪ್ಪನುನ್ನು ಹೊಡೆದು ಶೆಡ್ ನಲ್ಲಿ ಮಲಗಿಸಿದ್ದಾರೆ ಎಂದು ತಿಳಿಸಿದ , ಎಂದು ಹೇಳಿರುತ್ತೇನೆ. ಆ ಸಮಯದಲ್ಲಿ ಶ್ರೀಕಂಠ ನ ಹೆಂಡತಿ ಹೆರಿಗೆಗಾಗಿ ಮೈಸೂರಿನಲ್ಲಿ ಇದ್ದಳು ಎಂದು ಪೊಲೀಸರ ಮುಂದೆ ಹೇಳಿರುವುದಿಲ್ಲ.

10. ನಾನು ಮೇಲ್ಕಂಡಂತೆ ಪೊಲೀಸರ ಮುಂದೆ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ನ್ಯಾಯಾಲಯಯದ ಮುಂದೆ ಸುಳ್ಳು ಹೇಳುತ್ತಿದ್ದೆನೆ ಎನ್ನುವುದು ಸರಿಯಲ್ಲ.

11. ಹುಲ್ಲಾಪುರ ದಿಂದ ನಂಜನಗೂಡಿಗೂ ಬರಬೇಕಾದರೆ 1 ಗಂಟೆ ಬೇಕಾಗುತ್ತದೆ. 05.00 ಗಂಟೆಗೆ ನನ್ನ ಮಗ ವಿಷಯವನ್ನು ನನಗೆ ಪೋನ್ ಮಾಡಿ ತಿಳಿಸಿದ ನಂತರ , ಅಕ್ಕ ಪಕ್ಕದವರಿಗೆ ವಿಷಯವನ್ನು ತಿಳಿಸಿ ಅವರನ್ನು ಕರೆದುಕೊಂಡು ನಂಜನಗೂಡು ಪೋಲಿಸ್ ಠಾಣೆಗೆ ಬರುವ ಪ್ರಯತ್ನ ಮಾಡಿರುವುದಿಲ್ಲ. ನನ್ನ ಮಗ ಪೋನ್ ಮಾಡಿ ವಿಷಯ ತಿಳಿಸಿದಾಗ ಆತನಿಗೆ ನೀನು ಪೊಲೀಸ್ ಠಾಣೆಗೆ ದೂರನ್ನು ನೀಡು ಎಂದು ನಾನು ಹೇಳಿರುವುದಿಲ್ಲ. ನನ್ನ ಮಗ ಶ್ರೀಕಂಠ ನ ಹೆಂಡತಿಯ ಮನೆ ನಂಜನಗೂಡು ಟೌನ್ ನಲ್ಲಿ ಇದೆ ಎನ್ನುವುದು ಸರಿ. ಆತನಿಗೆ ಅತ್ತೆ , ಮಾವ , ಭಾವ , ಮೈದುನ ಇದ್ದಾರೆ ಎನ್ನುವುದು ಸರಿ. ಅವರಿಗೆ ನಾನು ಪೋನ್ ಮಾಡಿ , ಪೊಲೀಸರಿಗೆ ತಿಳಿಸಿ ಎಂದೆನು ಹೇಳಿರುವುದಿಲ್ಲ. ಆ ದಿನ ರಾತ್ರಿ ಶ್ರೀಕಂಠ ನಂಜನಗೂಡಿನ ಚಾಮಲಾಪುರದಲ್ಲಿ ಇದ್ದ. ನಾನು ಆತನನ್ನು ಭೀಟಿಯದಾಗ ಪೆುಲೀಸರಿಗೆ ಏಕೆ ವಿಷಯವನ್ನು ತಿಳಿಸಲಿಲ್ಲ ಎಂದೆನೂ ಕೇಳಿರಲಿಲ್ಲ. ಹುಣಸಾಳು ಗ್ರಾಮದವರಿಗೆ ವಿಷಯ ತಿಳಿಸಿದ್ದೀಯಾ ಎಂದು ಸಹ ಆತನನ್ನು

ಕೇಳಿರುವುದಿಲ್ಲ. ನನ್ನ ಗಂಡನ ಸಾವಿಗೆ ಶ್ರೀಕಂಠನೇ ಕಾರಣ ಎಂದು ಗ್ರಾಮದಲ್ಲಿ ಸಂಶಯ ಪಡುತ್ತಿದುದರಿಂದ ನಾವು ಈ ವಿಷಯವನ್ನು ಎಲ್ಲರಿಂದಲೂ ಮುಚ್ಚಿಟ್ಟಿವು ಎನ್ನುವುದು ಸರಿಯಲ್ಲ. ನಮ್ಮ ಹಾಗೂ ಆರೋಪಿತರ ನಡಡುವೆ ಯಾವುದೇ ರೀತಿಯ ಕ್ರಿಮಿನಲ್ ಕೇಸ್ ನಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ನಮ್ಮಗಳ ನಡುವೆ ಸಿವಿಲ್‌ವ್ಯಾಜ್ಯ ನಡೆಯುತ್ತಿತ್ತು ಎನ್ನುವುದು ಸರಿ. ಸಿವಿಲ್ ವ್ಯಾಜ್ಯದ ಹಿನ್ನೆಲೆಯಲ್ಲಿ ಈ ಆರೋಪಿತರನ್ನು ಈ ಪ್ರಕರಣದಲಿಲ ಸೇರಿಸಿರುತ್ತೇವೆ ಎನ್ನುವುದು ಸರಿಯಲ್ಲ. ನನ್ನ ಗಂಡನ ಸಾವಿಗೂ ಆರೊಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ಮೊದಲನೆ ಹೆಂಡತಿ ಮತ್ತು ಮಕ್ಕಳೊಂದಿಗೆ ನನ್ನ ಗಂಡನ ಸಂಬಂಧ ಚೆನ್ನಾಗಿತ್ತು ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**